ನಿಂತುಹೋಗಿರುತ್ತದೆ. ರೈಸಿಂಗ್ ಮೈನ್ ಅನ್ನು ರಿಪೇರಿ ಮಾಡಿಸುತ್ತಿದ್ದೇವೆ. ಕೆಲವು ಕಡೆ ಸೋರ್ಸ್ ಇಲ್ಲ, ಅಲ್ಲಿ ಬೇರೆ ಸೋರ್ಸ್ ಹುಡುಕಿ ನೀರು ಕೊಡುತ್ತಿದ್ದೇವೆ. ಇನ್ನೇನು ಮಾಡಬೇಕು?

ಶ್ರೀ ರೇವು ನಾಯಕ್ ಬೆಳಮಗಿ: ಯಾವಾಗ ಆ ಕೆಲಸ ಮುಗಿಸುತ್ತಾರೆ?

Mr. Speaker: I cannot compel the Minister to answer like this or like that.

(ಈ ಹಂತದಲ್ಲಿ ಸದಸ್ಯರಾದ ಶ್ರೀ ರೇವು ನಾಯಕ್ ಬೆಳಮಗಿಯವರು ಸದನದ ಬಾವಿಗೆ ತೆರಳಿದರು.)

ಅಧ್ಯಕ್ಷರು: ಉತ್ತರವನ್ನು ಪರ್ಫೆಕ್ಟಾಗಿ ಹೇಳಿದ್ದೇವೆಂದು ಸಚಿವರು ಹೇಳಿದ ಮೇಲೆ, I cannot compel the Minister. Don't encourage such attitude.

Sri S. Suresh Kumar: You should understand his helplessness. ಅವರೇನು ತಪ್ಪು ಮಾಡಿದ್ದಾರೆ?

ಅಧ್ಯಕ್ಷರು: ಅವರು ಅಷ್ಟೇ ಉತ್ತರ ಕೊಡುವುದೆಂದು ಹೇಳಿದ ಮೇಲೆ ಏನು ಮಾಡಲಿ?

ಶ್ರೀ ಎಸ್. ಸುರೇಶ್ ಕುಮಾರ್: ಅವರ ಸ್ಥಿತಿ ಅರ್ಥ ಮಾಡಿಕೊಳ್ಳಿ.

ಅಧ್ಯಕ್ಷರು: ನನಗೂ ಅರ್ಥವಾಗುತ್ತದೆ. ನನಗೇನೂ ಅರ್ಥವಾಗುವುದಿಲ್ಲವೆಂದು ಹೇಳಬೇಕಾಗಿಲ್ಲ. ಪ್ರತಿಯೊಬ್ಬ ಮೆಂಬರ್ ಸಹ ಅವರವರ ಪ್ರಶ್ನೆ ಕೇಳಿದಾಗ, ಹೀಗೆ ನಿಂತುಕೊಂಡರೆ ಹೇಗೆ? Go to the chamber of the concerned Minister and have a detailed discussion. ಮಂತ್ರಿಗಳ ಹತ್ತಿರ ಹೋಗಿ ಮಾತನಾಡಿ. I cannot compel the Minister to answer like this or like that. ಅವರು ಸಾಲ್ವ್ ಮಾಡುತ್ತಾರೆ. ಅವರು ನಿಮ್ಮ ಛೇಂಬರ್ಸ್‌ಗೆ ಬರುತ್ತಾರೆ.

ಶ್ರೀ ಎಂ.ವೈ. ಘೋರ್ಪಡೆ: ಆಗಬಹುದು.

(ಈ ಹಂತದಲ್ಲಿ ಶ್ರೀ ರೇವು ನಾಯಕ್ ಬೆಳಮಗಿಯವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)

ಮುಲ್ಕಿ ಹೋಬಳಿಯ ಗ್ರಾಮಗಳಿಗೆ ಶಾಶ್ವತ ನೀರು ಸರಬರಾಜು

154(1610) ಶ್ರೀ ಅಭಯಚಂದ್ರ ಕೆ (ಮೂಡಬಿದಿರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಹೋಬಳಿಯ 9 ಗ್ರಾಮಗಳಿಗೆ ಶಾಶ್ವತ ನೀರು ಒದಗಿಸಿ ಸಕಾಲದಲ್ಲಿ ನೀರು ಸರಬರಾಜು ಮಾಡುವ ಯೋಜನೆ ಹಾಗೂ ಸರ್ವೆ ಕೆಲಸದ ಕಾರ್ಯ ಯಾವ ಹಂತದಲ್ಲಿರುತ್ತದೆ;

ಅ) ಚಾಲ್ತಿ ಸಾಲಿನಲ್ಲಿಯಾದರೂ ಕೆಲಸ ಪೂರ್ಣಗೊಳ್ಳುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು): ಅ) ಈ ಹಿಂದೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಮುಲ್ಕಿ ಪಟ್ಟಣ ಮತ್ತು ದಾರಿ ಮಧ್ಯದ 6 ಗ್ರಾಮಗಳಿಗೆ ನೀರು ಪೂರೈಕೆಗಾಗಿ ರೂ. 4.50 ಕೋಟಿ ಮೊತ್ತದ ಅಂದಾಜು ಪಟ್ಟಿಯನ್ನು ತಯಾರಿಸಿತ್ತು. ಆದರೆ, ಪರಿಷ್ಕೃತ ಪ್ರಸ್ತಾವನೆಯ ಪ್ರಕಾರ, ಮುಲ್ಕಿ ಪಟ್ಟಣಕ್ಕೆ ನೀರು ಸರಬರಾಜನ್ನು ಮಂಗಳೂರು ನಗರ ನೀರು ಸರಬರಾಜು ಯೋಜನೆಯಿಂದ ಪಡೆಯಲು ಉದ್ದೇಶಿಸಿರುವುದರಿಂದ, ಮಂಡಳಿಯು ಹಿಂದೆ ತಯಾರಿಸಿದ್ದ, ರೂ. 4.50 ಕೋಟಿ ಮೊತ್ತದ ಯೋಜನೆಯನ್ನು ಕೈಬಿಡಲಾಗಿದೆ.

ಆ) ಮೇಲ್ಕಂಡ ಹಿನ್ನೆಲೆಯಲ್ಲಿ, ಮುಲ್ಕಿ ಜೋಬಳಿಯಲ್ಲಿ ಅಧಿಕ ಲವಣಾಂಶ ಸಮಸ್ಯೆಯನ್ನು ಎದುರಿಸುತ್ತಿರುವ ಗ್ರಾಮಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ಸಬ್-ಮಿಷನ್ ಕಾರ್ಯಕ್ರಮದಡಿ ಪ್ರಸ್ತಾವನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಗೆ ನಿರ್ದೇಶಿಸಲಾಗಿದೆ.

ಶ್ರೀ ಕೆ. ಅಭಯಚಂದ್ರ: ಮಾನ್ಯ ಅಧ್ಯಕ್ಷರೆ, ಈ ಹಿಂದೆ ಮುಲ್ಕಿಪಟ್ಟಣಕ್ಕೆ ನೀರು ಒದಗಿಸುವ ಯೋಜನೆಯನ್ನು ಈಗ ಕೈಬಿಡಲಾಗಿದೆ ಎಂದು ಹೇಳಿದ್ದಾರೆ. ಹಳೆ ಅಂಗಡಿ, ಸಸಿಹಿತ್ಲು, ಕಾಟ್ಟಾಡಿ, ಬೆಳ್ಳಿಹಾರು ಗ್ರಾಮಗಳಲ್ಲಿ ಉಪ್ಪು ನೀರಿದ್ದು, ಜನರಿಗೆ ಕುಡಿಯಲು ಶುದ್ಧ ನೀರಿಲ್ಲ. ಈ ಯೋಜನೆಯನ್ನು ಇಲ್ಲಿ ಬಿಟ್ಟಿದ್ದರಿಂದ, ನಮ್ಮ ಹಳ್ಳಿಗಳಿಗೂ, ಮುಲ್ಕಿ ನಗರ ಪಂಚಾಯಿತಿಗೂ ಕುಡಿಯುವ ನೀರಿಗೆ ಬಹಳ ತೊಂದರೆ ಆಗಿದೆ. ಅದನ್ನು ಸರಿಪಡಿಸಬೇಕು. ಅದನ್ನು ಹೊಸ ಸಬ್‌ಮಿಷನ್ ಪ್ರೋಗ್ರಾಂನಿಂದ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಈಗಾಗಲೇ ರಾಜೀವ್‌ಗಾಂಧಿ ಮಿಷನ್‌ನಿಂದ ಹಣ ಬಂದಿದ್ದರಿಂದ ಎರಡು ಕೋಟಿ ರೂಪಾಯಿಗಳನ್ನು ತಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಭರಿಸಿದರೆ, ನಾಲ್ಕೂವರೆ ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಪೂರ್ಣವಾಗುತ್ತದೆಂದು ಜಿಲ್ಲಾಪಂಚಾಯತ್ ಇಲಾಖೆಯಿಂದ ನಮಗೆ ಮಾಹಿತಿ ಬಂದಿದೆ. ಸಚಿವರು ಅದನ್ನು ಪೂರ್ಣಗೊಳಿಸಿ ಎಂದು ನಾನು ಕೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ: ನನ್ನ ಕಡೆ ಇರುವ ಮಾಹಿತಿಯ ಪ್ರಕಾರ ಈ ಮುಲ್ಕಿ ಮತ್ತು ದಾರಿಯಲ್ಲಿರುವ 6 ಗ್ರಾಮಗಳಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನೀರು ಕೊಡಬೇಕೆನ್ನುವ ಕಾರ್ಯಕ್ರಮವಿದ್ದು, ಇದಕ್ಕೆ 4.50 ಕೋಟಿ ರೂಪಾಯಿ ಖರ್ಚಾಗುವ ಅಂದಾಜಿತ್ತು. ಅದರೆ ಇದನ್ನು ಕೈ ಬಿಟ್ಟಿದ್ದಾರೆ ಇದಕ್ಕೇನು ಕಾರಣ ಎಂದರೆ, ಮಂಗಳೂರಿನಿಂದ ನೇರವಾಗಿ ಈ ಮುಲ್ಕಿ ಪಟ್ಟಣ ಹಾಗೂ ದಾರಿಯ ಮಧ್ಯದಲ್ಲಿ ಬರುವ 6 ಗ್ರಾಮಗಳಿಗೆ ನೀರು ಸರಬರಾಜು ಮಾಡಬೇಕೆನ್ನುವ ಹೊಸ ಕಾರ್ಯಕ್ರಮ ಹಾಕಿಕೊಂಡಿದ್ದು, ಈ ಯೋಜನೆಯನ್ನು ಸಬ್‌ಮಿಷನ್ ಕಾರ್ಯಕ್ರಮದಡಿಯಲ್ಲಿ ಮಾಡಬೇಕೆನ್ನುವ ವಿಚಾರ ಇದೆ. ಅದಷ್ಟು ಬೇಗ ಈ ಯೋಜನೆಯನ್ನು ಅಂದಾಜು ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಅದರ ಬಗ್ಗೆ ಏನು ಮಾಡಲಿಕ್ಕೆ ಸಾಧ್ಯವೋ ಅದನ್ನು ಮಾಡುತ್ತೇವೆ.

ಶ್ರೀ ಕೆ. ಅಭಯಚಂದ್ರ: ಈಗಾಗಲೇ ಎರಡು ವರ್ಷ ಕಳೆದರೂ ಇನ್ನೂ ನಮ್ಮ ಈ ಕಾರ್ಯಕ್ರಮ ಆಗಿರುವುದಿಲ್ಲ.

ಶ್ರೀ ಎಂ.ವೈ. ಘೋರ್ಪಡೆ: ನಾನೀಗಾಗಲೇ ಹೇಳಿದಂತೆ ಹೊಸ ಯೋಜನೆಗೆ ಎಷ್ಟು ದುಡ್ಡು ಬೇಕು ಎನ್ನುವ ಅಂದಾಜನ್ನು ಮಾಡಿ ಮೂರು ತಿಂಗಳಲ್ಲಿ ಜೆಡ್‌ಪಿ ಯ ಸಿ ಇ ಓ ರವರು ಕಳುಹಿಸಿ ಕೊಡಬೇಕೆಂದು ನಾವು ಆದೇಶ ಕೊಡುತ್ತೇವೆ ಇದಕ್ಕಿಂತಲೂ ಹೆಚ್ಚಿಗೆ ನಾವೇನು ಮಾಡುವುದಕ್ಕೆ ಸಾಧ್ಯ?

ಶ್ರೀ ಕೆ. ಅಭಯಚಂದ್ರ: ನಿಮ್ಮಿಂದಲೇ 2.17 ಕೋಟಿ ಪ್ರಸ್ತಾವನೆ ಬಂದರೆ ನಾವು ಮುಗಿಸುತ್ತೇವೆ ಎನ್ನುವುದು ಬಂದಿದೆ.

ಶ್ರೀ ಎಂ.ವೈ. ಘೋರ್ಪಡೆ: ಸಬ್‌ಮಿಷನ್ ಅಡಿಯಲ್ಲಿ ಪ್ರಸ್ತಾವನೆ ಬಂದಿಲ್ಲ.

ಅಧ್ಯಕ್ಷರು: ಮೂರು ತಿಂಗಳಲ್ಲಿ ಮುಗಿಸಿಕೊಡುತ್ತೇವೆಂದು ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರಲ್ಲ ಬಿಡಿ ಮುಗಿಸಿ ಕೊಡುತ್ತಾರೆ. ಮುಂದಿನ ಪ್ರಶ್ನೆ ಮಾನ್ಯ ಕೃಷ್ಣಮೂರ್ತಿಯವರು ಕೇಳಬೇಕು.

ಚಾಮರಾಜನಗರ ತಾಲ್ಲೂಕಿನ ಜಿಲ್ಲಾ ಪಂಚಾಯತ್ ರಸ್ತೆಗಳ ಅಭಿವೃದ್ಧಿ

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಚಂದಕವಾಡಿ ಹೋಬಳಿ ಹಾಗೂ ಸಂತೇಮರಹಳ್ಳಿ ಮತ್ತು ನಂಜನಗೂಡು ತಾಲ್ಲೂಕು ಕಾವಲಂದೆ ಹೋಬಳಿಯನ್ನೊಳಗೊಂಡ ಸಂತೇಮರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಪಂಚಾಯತ್ ರಸ್ತೆಗಳು ಯಾವುವು;

ಆ) ಈ ರಸ್ತೆಗಳಲ್ಲಿ ಎಷ್ಟು ಕಿ.ಮೀ. ಉದ್ದದ ಯಾವ ಯಾವ ರಸ್ತೆ ಡಾಂಬರೀಕರಣವಾಗಿದೆ; ಡಾಂಬರೀಕರಣವಾಗದೇ ಉಳಿದಿರುವ ರಸ್ತೆಗಳು ಯಾವುವು;

ಇ) 1998-99 ರಿಂದ ಈವರೆಗೆ ಅಂದರೆ 2000-01 ರವರೆಗೆ ರಸ್ತೆಗಳ ದುರಸ್ತಿಗಾಗಿ ಮಂಜೂರಾಗಿರುವ ಹಣವೆಷ್ಟು; (ವರ್ಷವಾರು ವಿವರ ನೀಡುವುದು)

ಈ) ಯಾವ ಯಾವ ರಸ್ತೆಗಳು ಯಾವ ಯಾವ ಸಾಲಿನಲ್ಲಿ ಡಾಂಬರೀಕರಣಗೊಂಡಿದೆ. ಉಳಿದ ರಸ್ತೆಗಳನ್ನು ಡಾಂಬರೀಕರಣಗೊಳಿಸಲು ಹಣ ಬಿಡುಗಡೆ ಮಾಡಲಾಗಿದೆಯೆ; ಹಾಗೂ ಈ ಸಾಲಿನಲ್ಲಿ ಸದರಿ ರಸ್ತೆಗಳ ದುರಸ್ತಿಗಾಗಿ ಬಿಡುಗಡೆ ಮಾಡಲಾಗಿರುವ ಹಣವೆಷ್ಟು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಚಾಮರಾಜನಗರ ತಾಲ್ಲೂಕಿನ ಚಂದಕವಾಡಿ ಹಾಗೂ ಸಂತೇಮರಹಳ್ಳಿ ಹೋಬಳಿಗಳು ಮತ್ತು ನಂಜನಗೂಡು ತಾಲ್ಲೂಕಿನ ಕಾವಲಂದೆ ಹೋಬಳಿಯನ್ನೊಳಗೊಂಡ